ಓ:ಎಸ್:ನಂ.*114/2015*

ಪಿ.ಡಬ್ಲ್ಯೂ- *1*

***ದಿಃ 10-06-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.***

**ಮುಂದುವರಿದ *ಪಾಟೀ ಸವಾಲುಃ* ಪ್ರತಿವಾದಿ ಪರ ಶ್ರೀ ಸಿ ಎಸ್ ಎಸ್ ವಕೀಲರಿಂದ**

ದಾವ ಆಸ್ತಿಯನ್ನು ಯಾವಾಗ ರಾಮರಾಯರಿಗೆ ಮಂಜೂರಾಗಿದೆ ಎಂಬ ಮಾಹಿತಿಯನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಸದರಿ ವಿಚಾರಕ್ಕೆ ಸಂಬಂಧಪಟ್ಟಂತೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ-*1* ಮತ್ತು *2* ರಲ್ಲಿ ನಮೂದಿಸಿರುವ ಎಸ್ ಆರ್ ನಂ.*421/1, 68-69* ರ ಮಾಹಿತಿಯನ್ನು ಪತ್ರ ಬರಹಗಾರರಾದ ರೇವಣ್ಣನವರು ನನಗೆ ತಿಳಿಸಿರುತ್ತಾರೆ. ಆ ಸಂದರ್ಭದಲ್ಲಿ ನಾನು ದಾಖಲೆಯನ್ನು ನೋಡಿರುವುದಿಲ್ಲ. ಸಾಕ್ಷಿಯು ಸ್ವತಃ ಮುಂದುವರಿದು ನಾನು ಓದು ಬರಹ ಕಲಿತಿರುವುದಿಲ್ಲ, ಅದ ಕಾರಣ ನೋಡಿರುದಿಲ್ಲ ಎಂದು ನುಡಿಯಿತ್ತಾರೆ. ಸದರಿ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಮೇಲ್ಕಂಡ ದಾಖಲಾತಿಯಲ್ಲಿ ನಮೂದು ಮಾಡಿರುವ ಚಕ್ಕುಬಂದಿ ಮತ್ತು ನಿಪಿ-*1* ಮತ್ತು *2* ರ ದಾಖಲಾತಿಗಳಲ್ಲಿ ನಮೂದು ಮಾಡಿರುವ ಚಕ್ಕುಬಂದಿಯು ಬೇರೆ ಬೇರೆ ಇದೆ ಎಂದರೆ ಸರಿಯಲ್ಲ. ನಿಪಿ-*1* ಮತ್ತು *2* ರ ನಮೂದು ಮಾಡಿರುವ *68*ನೇ ಸಾಲಿನ ಕ್ರಯಪತ್ರದಲ್ಲಿ ನಮೂದು ಮಾಡಿರುವ ಚಕ್ಕುಬಂದಿ ಪೂರ್ವಕ್ಕೆಃ ಅಚ್ಚಮ್ಮರವರ ಜಮೀನು ಇದೆ. ನಿಪಿ-*1* ಮತ್ತು *2* ರ ದಾಖಲಾತಿಗಳಲ್ಲಿ ನಮೂದು ಮಾಡಿರುವ ಆಸ್ತಿಯ ಚಕ್ಕುಬಂದಿ ಪೂರ್ವಕ್ಕೆಃ ನಿರ್ಮಾಣಪ್ಪನ ಜಮೀನು ಎಂದು ನಮೂದು ಮಾಡಿದ್ದು ಅದು ಸರಿ ಅಲ್ಲ ಎಂದರೆ ಸರಿಯಲ್ಲ.

ನಾನು ದಾವ ಸ್ವತ್ತನ್ನು ಕ್ರಯಕ್ಕೆ ಪಡೆದ ನಂತರ ಅಳತೆ ಮಾಡಿಸಿರುತ್ತೇನೆ. ದಾವ ಆಸ್ತಿಗೆ ಹೊಸದಾಗಿ ಹಿಸ್ಸೆ ನಂಬರ್ ಕೊಟ್ಟಿರುತ್ತಾರೆಂದರೆ ಸರಿ. ಸದರಿ ಅಳತೆಯ ವಿಚಾರವಾಗಿ ನಾನು ಡಿಡಿ ಎಲ್ ಆರ್ ರವರ ಮುಂದೆ ಅಪೀಲನ್ನು ಸಲ್ಲಿಸಿದ್ದೇನೆಂದರೆ ಸರಿ. ದಾವ ಆಸ್ತಿಯ ಹಿಸ್ಸಾ ನಂಬರ್ *43/2* ಮತ್ತು *43/3* ರನ್ನು ರದ್ದುಪಡಿಸಿದ್ದಾರೆಂದರೆ ಸರಿ. ಇಲ್ಲಿಯತನಕ ನಾನು ಕೊಂಡಿರುವ ಜಮೀನಿಗೆ ಸಂಬಂಧಪಟ್ಟಂತೆ ಅಳತೆ ಮಾಡಿಸಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಜಮೀನಿಗೆ ಅಳತೆ ಮಾಡಿಸಲು ತಾಲ್ಲೂಕು ಕಛೇರಿಯಲ್ಲಿ ಅನೇಕ ಬಾರಿ ಅರ್ಜಿಯನ್ನು ಸಲ್ಲಿಸಿದ್ದು, ಸದರಿಯವರು ನನಗೆ ಇವತ್ತು ಬಾ ನಾಳೆ ಬಾ ಎಂದು ಸತಾಯಿಸಿರುತ್ತಾರೆ. ನಾನು ಈ ದಾವೆಯನ್ನು ಸಲ್ಲಿಸುವ ಕಾಲಕ್ಕೆ ದಾವ ಆಸ್ತಿಯ ಸರ್ವೇ ನಂಬರ್ *43* ಇತ್ತು. ನಿಪಿ-*6* ರಲ್ಲಿ ಬರೆದಿರುವ

ಸಂಗತಿಗಳು ಸರಿ ಇದೆ. ನಿಪಿ-*6* ರ ಪ್ರಕಾರ ನಾನು ಈ ದಾವೆಯಲ್ಲಿ ದಾವ ಆಸ್ತಿಯ ಸರ್ವೆ ನಂಬರ್ ನ್ನು ತೋರಿಸಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿ ಮಂಜುನಾಥ್ ರವರಿಗೆ ದಾವ ಆಸ್ತಿಯ ಸರ್ವೆ ನಂಬರ್ ನಲ್ಲಿ *2* ಎಕರೆ *36* ಗುಂಟೆ ಜಮೀನು ಇದೆ ಎಂದರೆ ಸರಿಯಲ್ಲ. ಪ್ರತಿವಾದಿಯು ತನಗೆ ಸೇರಿದ ಜಮೀನಿನಲ್ಲಿ ಸ್ವಾಧೀನಾನುಭವದಲ್ಲಿದ್ದಾರೆಂದರೆ ಸರಿಯಲ್ಲ. ನಾನು ಪ್ರತಿವಾದಿಯ ಜಮೀನನ್ನು ಸೇರಿಸಿ ನಾನು ಅಳತೆ ಮಾಡಲು ಪ್ರಯತ್ನಪಟ್ಟಿರುತ್ತೇನೆಂದರೆ ಸರಿಯಲ್ಲ. ಪ್ರತಿವಾದಿ ನನ್ನ ವಿರುದ್ದ ಇದೆ ನ್ಯಾಯಾಲಯದಲ್ಲಿ ಒಂದು ದಾವೆಯನ್ನು ಸಲ್ಲಿಸಿದ್ದಾರೆಂದರೆ ಸರಿ. ದಿನಾಂಕಃ *01-04-2015* ಮತ್ತು *15-04-2015* ರಲ್ಲಿ ಪ್ರತಿವಾದಿಯು ನನ್ನ ಜಮೀನಿಗೆ ಬಂದು ತಕರಾರು ಮಾಡಿದ್ದಾರೆಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ನಾನು ದಾವ ಆಸ್ತಿಯ ವಾದ ಪತ್ರದಲ್ಲಿ ನಮೂದು ಮಾಡಿರುವ ಚಕ್ಕುಬಂದಿಯಲ್ಲಿ ನಾನು ಸ್ವಾಧೀನಾನುಭವದಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವ ಆಸ್ತಿಯನ್ನು ಮಾರಾಟ ಮಾಡಲು ನನ್ನ ಮಾರಾಟಗಾರರಿಗೆ ಯಾವುದೇ ರೀತಿಯ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.*43* ಮೂಲತಃ ವೀರೂಪಾಕ್ಷಪ್ಪ ಬಿನ್ ಮಲ್ಲಪ್ಪನವರಿಗೆ ಸೇರಿದ ಸ್ವತ್ತಾಗಿತ್ತು ಎಂದರೆ ಸರಿ. ದಿನಾಂಕಃ *08-09-1952* ರಂದು ವೀರೂಪಾಕ್ಷಪ್ಪ ಬಿನ್ ಮಲ್ಲಪ್ಪನವರು ಸರ್ವೇ ನಂ.*43* ರ ದಕ್ಷಿಣ ಭಾಗದ *10* ಎಕರೆ *36* ಗುಂಟೆ ಜಮೀನನ್ನು ಅಚ್ಚಮ್ಮ ಅಲಿಯಾಸ್ ಪುಟ್ಟಮ್ಮ ಕೋಂ ರಾಮಯ್ಯ ಎಂಬುವವರಿಗೆ ಮಾರಾಟ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.*43* ರ ಉಳಿಕೆ ಉತ್ತರಭಾಗದ ಜಮೀನನ್ನು ಸಹ ವೀರೂಪಾಕ್ಷಪ್ಪರವರು ಇತರರಿಗೆ ಕ್ರಯ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.*43* ರಲ್ಲಿ *2* ಎಕರೆ *36* ಗುಂಟೆ ಜಮೀನನ್ನು ಅಚ್ಚಮ್ಮರವರು ಹುಚ್ಚ ಮರಿಯಪ್ಪರವರಿಗೆ ದಾನ ಮಾಡಿದ್ದಾರೆಂದರೆ ಸಾಕ್ಷಿಯು ಜಮೀನೇ ಇಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ನಿಪಿ-*4* ಮತ್ತು *5* ರಲ್ಲಿ ವೀರೂಪಾಕ್ಷಪ್ಪರವರು ಅಚ್ಚಮ್ಮನವರಿಗೆ ಮಾರಾಟ ಮಾಡಿದ ಬಗ್ಗೆ ನಮೂದು ಇದೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಅಚ್ಚಮ್ಮನವರು ಸಹ ದಾನ ಮಾಡಿದ ಬಗ್ಗೆ ನಮೂದು ಇದೆ ಎಂದರೆ ನನಗೆ ಗೊತ್ತಿಲ್ಲ. ದಾನ ಪತ್ರದ ಪ್ರಕಾರ ಪುಟ್ಟಮರಿಯಪ್ಪನವರಿಗೆ *2* ಎಕರೆ *36* ಗುಂಟೆ ಜಮೀನಿಗೆ ಪಹಣಿಗಳು ಬರುತ್ತಿವೆ ಎಂದರೆ ನನಗೆ ಗೊತ್ತಿಲ್ಲ. ಪುಟ್ಟ ಮರಿಯಪ್ಪನ ಮೊಮ್ಮಗನೇ ಈ ದಾವೆಯ ಪ್ರತಿವಾದಿ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯ ಹೆಸರಿನಲ್ಲಿ ಸರ್ವೆ ನಂ.*43* ರಲ್ಲಿ *2* ಎಕರೆ *36* ಗುಂಟೆ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯು ಸರ್ವೆ ನಂ.*43* ರಲ್ಲಿ *2* ಎಕರೆ *36* ಗುಂಟೆ ಜಮೀನಿನಲ್ಲಿ ಸ್ವಾಧೀನಾನುಭವದಲ್ಲಿದ್ದರೂ

ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

*ಓ. ಕೇ. ಸ. ಇ. ಎ. ಒ.*

Sd/-

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**